ಹಾಕಬೇಕಾಗಿದ್ದು ಅನಿವಾರ್ಯ. ಯಾವ ಮಾತೂ ಬಾಯಿ ಜಾರ ಬಾರದೆಂಬಂತೆ ತುಟಿ ಕಚ್ಚಿ ಹಿಡಿದು ತಲೆ ಬಗ್ಗಿಸಿ ಕೂತುಕೊಂಡ ಪದ್ಮನಾಭ. ಭಗ್ಗನೆ ಬಿಸಿಯೇರಿದ್ದ ಮೈ ರಕ್ತ ಕ್ರಮೇಣ ತಣ್ಣಗಾಯ್ತು. ಒಂದು ಮಾತು ತೀರ್ಮಾನವಾಯಿತೆಂದರೆ ಈ ಮನೆಯಲ್ಲಿ ಉಣ್ಣುವುದೋ, ಅಥವಾ ಕೊಡವಿಕೊಂಡು ಹೋಗುವುದೋ ನಿರ್ಧಾರ ಮಾಡಬಹುದಿತ್ತು. ಸ್ಪಷ್ಟವಾಗಿ ಬಾಯಿ ಬಿಡುತ್ತಿಲ್ಲ ಮನುಷ್ಯ.

ಪದ್ಮನಾಭನ ಎದುರು ಕುಡಿ ಬಾಳೆಲೆ ವರೆಸಿ ಹಾಕಿದ ರಾಮಚಂದ್ರ. ಎಲೆ ತುದಿಯಲ್ಲಿ ಉಪ್ಪು, ಉಪ್ಪಿನಕಾಯಿ. ಎಡಗೈ ಬುಡದಲ್ಲಿ ನೀರಿನ ಲೋಟ. ಹಬೆಯಾಡುತ್ತಿರುವ ಅನ್ನದ ಮೇಲೆ ಕೆಂಪರಿವೆ ಸೊಪ್ಪಿನ ಹುಳಿ. ಮೇಲೆ ಎರಡು ಚಮಚ ತುಪ್ಪ.

'ಮನೆ ಹಿತ್ಲಲ್ಲಿ ಬೆಳೆದಿರೋ ಸೊಪ್ಪು ಕಣೋ. ಉಂಡು ನೋಡು. ನಳ ಮಹಾರಾಜ ಸತ್ತು ನಿನ್ನಪ್ಪ ಹುಟ್ಟಿದ್ದು ಅಂತ ನೀನೇ ಒಪ್ಕಂತೀಯಾ..' ಸನ್ನಿವೇಶದ ಬಿಗುವನ್ನು ಸಡಿಲಿಸುವಂತೆ ವಿನಾಕಾರಣ ನಕ್ಕ ರಾಮಚಂದ್ರ. ಅಳತೆ ಹಿಡಿದು ಜೋಡಿಸಿಟ್ಟಂತಹಾ ದಂತಪಂಕ್ತಿ ಕಂಡು ಪದ್ಮನಾಭನ ಎದೆ ಝುಗ್ಗೆಂದಿತು. ತನ್ನ ಹಲ್ಲುಗಳೂ ಹೀಗೇ ಅಲ್ಲವೇ? ಹಲ್ಲು ಕಿರಿದು ಕನ್ನಡಿಯಲ್ಲಿ ನೋಡಿಕೊಳ್ಳುವಾಗ ಥೇಟ್ ಹೀಗೇ..

'ಬಾಳೆಲೆ ಮುಂದೆ ಕೂತ್ಗಂಡು ತಪಸ್ಸು ಮಾಡ್ತಿದೀಯನೋ? ಉಣ್ಣೋ ಮಾರಾಯಾ..'

ಅನ್ನಕ್ಕೆ ಕೈಯಿಡುವ ಮನಸ್ಸು ಮಾಡಲಿಲ್ಲ ಪದ್ಮನಾಭ. ಹಣ್ಣೋ, ಕಾಯೋ? ಕಾಯೋ, ಹಣ್ಣೋ?

'ಆಯ್ತು, ಅನ್ನ ಅಂದ್ರೆ ದೇವರ ನೈವೇದ್ಯ. ಅದರೆದುರು ಕೂತು ಮಾತು ಕೊಡ್ತೀನಿ. ನಿನ್ನ ಅಕ್ಕನ ನಿಶ್ಚಿತಾರ್ಥಕ್ಕೆ, ಮದುವೆಗೆ ಬಂದು ಹೋಗ್ತೀನಿ, ಸಂತೋಷಾನಾ?'

ಚಕ್ಕನೆ ತಲೆ ಎತ್ತಿ ಪದ್ಮನಾಭ ಸೌಟು ಹಿಡಿದು ಕುಕ್ಕರುಗಾಲಲ್ಲಿ ಎದುರು ಕೂತಿದ್ದ ಅಪ್ಪನ ಕಡೆ ನೋಡಿದ. ಕೃತಜ್ಞತೆಯಿಂದ ಕಣ್ಣು ತುಂಬಿ ಬಂತು. ಎರಡು ಹನಿ ಕಪೋಲಗಳ ಮೇಲಿಂದ ಜಾರಿ ಎದುರಿನ ಅನ್ನದ ಮೇಲೆ ಬಿದ್ದು, 'ಹುಳಿಗೆ ಉಪ್ಪು ಜಾಸ್ತಿಯಾದ್ರೆ ನನ್ಮೇಲೆ ಮಾತಿಲ್ಲ, ಗೊತ್ತಾಯ್ತಾ?' ಛೇಡಿಸುತ್ತಿದ್ದಾನೆ ರಾಮಚಂದ್ರ. ಪದ್ಮನಾಭ ನಿಶ್ಚಿಂತ ಮನಸ್ಸಿನಿಂದ ಅನ್ನ ಕಲೆಸಿದ.

'ನೀವಿಬ್ರೂ ನನ್ನ ಮಕ್ಕಳಲ್ವೇನ್ರೋ? ನೀವೇನು ಪಾಪ ಮಾಡಿದೀರಿ ಅಂತ ನಿಮಗೆ ಶಿಕ್ಷೆ ಕೊಡ್ಬೇಕು? ಹೊಟ್ಟೆಯೊಳಗಿರೋ ಕೈಯಿ ಏನೇನೋ ಮಾತಾಡಿಸಿ ಬಿಡುತ್ತೆ. ಅದೆಲ್ಲಾ ನಿಜ ಅಂದ್ಕಂಬಿಡ್ಬೇಡ. ನಮ್ಮಿಂದ ಬೇರೆಯೋರಿಗೆ ಒಳ್ಳೇದಾಗ್ದಿದ್ರೆ ಬ್ಯಾಡಪ್ಪಾ, ಕೆಟ್ಟದ್ದಂತೂ ಮಾಡ್ಬಾರ್ದು, ಏನಂತಿ?' ಅಪ್ಪ ಸ್ವಹಸ್ತದಿಂದ ಮಾಡಿ ಬಡಿಸಿದ ಹುಳಿಗಿಂತಲೂ ಅವರು ಆಡುತ್ತಿದ್ದ ಮಾತುಗಳು ಮತ್ತಷ್ಟು ರುಚಿಕಟ್ಟಾಗಿ ಕೇಳಿಸಿ ಹೊಟ್ಟೆ ತುಂಬಾ ಉಂಡ ಪದ್ಮನಾಭ. ಮೊಸರನ್ನ ಕಲೆಸುವಾಗ ಅಪ್ಪ ಹೇಳಿದ ಮತ್ತೊಂದು ಮಾತು ಪದ್ಮನಾಭನನ್ನು ಸಂಪೂರ್ಣ ಕರಗಿಸಿಬಿಟ್ಟಿತು. ಮನದೊಳಗೆ ಅಷ್ಟಿಷ್ಟಾದರೂ ಉಳಿದುಕೊಂಡಿದ್ದ ಅಪರಿಚಿತ ಭಾವ ತಲೆ ಮರೆಸಿಕೊಂಡಿತು.

'ನೀವು, ನೀವು ಅಂತ ಯಾರೋ ಹೊರಗಿನೋರನ್ನ ಕರೆದ ಹಾಗೆ ಕರೀಬೇಡ ಮಾರಾಯಾ. ಒಂಥರಾ ಆಗುತ್ತೆ. ನೀನು ಅಂತಾನೇ ಕರಿ. ಕಿವಿಗೆ ಹಿತವಾಗಿರುತ್ತೆ..' ಹೃತ್ಪೂರ್ವಕವಾಗಿ ಹೂಂಗುಟ್ಟಿದ ಪದ್ಮನಾಭ.

ನಿಶ್ಚಿತಾರ್ಥಕ್ಕೆ ದಿನ ಇಟ್ಟುಕೊಂಡ ಮೇಲೆ ಅಪ್ಪನಿಗೆ ಫೋನ್ ಮಾಡಿ ವಿಷಯ ತಿಳಿಸುವ ಕುರಿತು ಮಾತನಾಡಿ ಹೊರಟು ನಿಂತ ಪದ್ಮನಾಭನಿಗೆ ಅನಿರೀಕ್ಷಿತ ಅಚ್ಚರಿಯೊಂದು ಕಾದಿತ್ತು. ರಾಮಚಂದ್ರ ಅವನನ್ನು ಆಲಂಗಿಸಿ ಬೆಚ್ಚನೆಯ ತೆಕ್ಕೆಯಲ್ಲಿ ಹಿಡಿದು ಹಣೆಯ ಮೇಲೆ ಹೂಮುತ್ತೊಂದನ್ನು ಒತ್ತಿದ.

'ಸಣ್ಣವನಿದ್ದಾಗ ನಿನ್ನ ಎತ್ತಿ ಮುದ್ದಾಡೋ ಭಾಗ್ಯ ಪಡ್ಕಂಬಂದಿರ್ಲಿಲ್ಲ. ದೇವರು ಇಷ್ಟಾದ್ರೂ ಕೃಪೆ ತೋರಿಸಿದ್ನಲ್ಲ, ಸಾಕು. ನನ್ನ ಮಗನಿಗೆ ಕೈಯಾರೆ ಊಟ ಹಾಕ್ದೆ. ಕಣ್ತುಂಬಾ ನೋಡ್ದೆ. ಕನಸಲ್ಲೂ ನೆನೆಸದೆ ಇದ್ದ ಭಾಗ್ಯ ಸಿಕ್ಕಿದ ಹಾಗಾಯ್ತು..'

ಅಪ್ರಜ್ಞಾಪೂರ್ವಕವಾಗಿ ಪದ್ಮನಾಭ ಅಪ್ಪನ ಪಾದ ಮುಟ್ಟಿ ನಮಿಸಿದ. 'ಹೋಗು ಅಪ್ಪಾ, ಊಟ ಮಾಡು' ಅಂದ.

'ಮಾಡ್ತೀನೋ, ಇವತ್ತು ಹೊಟ್ಟೆ ತುಂಬಾ ಊಟ ಮಾಡ್ತೀನಿ..'

* * *

ನಾಗಮ್ಮ ಕಾಲು ಸುಟ್ಟ ಬೆಕ್ಕಿನಂತೆ ಮನೆಯ ಒಳಗೂ, ಹೊರಗೂ ತಾರಾಡುತ್ತಿದ್ದಳು. ಅವಳ ಲೆಕ್ಕಾಚಾರದ ಪ್ರಕಾರ ಇಷ್ಟು ಹೊತ್ತಿಗೆ ವಾಪಸ್ ಬರಬೇಕಿತ್ತು ಮಗರಾಯ. ತನ್ನ ಮೇಲಿನ ಸಿಟ್ಟಿಗೆ ಏನೇನೆಲ್ಲಾ ವರೆದು ಅಪ್ಪ ಅನಿಸಿಕೊಂಡವನು ಮಗನ ತಲೆ ತಿರುಗಿಸಿದರೂ ಆಶ್ಚರ್ಯ ಇಲ್ಲ. ದಿವಸಾ ನೋಡುವ ಅಮ್ಮ ಅಂದರೆ ಎಷ್ಟಾದರೂ ಸಸಾರ. ತಪ್ಪು ಮಾಡಿದಾಗ ಬೈಯುವ, ಭಂಗಿಸುವ ಅಮ್ಮನಿಗಿಂತ ನಾಲಿಗೆಗೆ ಬೆಲ್ಲ ಹಚ್ಚಿಕೊಂಡು ಮಾತಾಡ ಬಹುದಾದ ಅಪ್ಪ ಪ್ರಿಯನಾಗಿ ಕಂಡರೆ ಆಶ್ಚರ್ಯವೇನಿಲ್ಲ. ಪದ್ಮನಾಭ ಅಪ್ಪನ ವಿಷಯ ಎತ್ತಿದಾಗಲೆಲ್ಲಾ ಕಡ್ಡಿ ಮುರಿದ ಹಾಗೆ ಮಾತಾಡುತ್ತಿದ್ದವಳು ತಾನು. ಪ್ರಾಯಕ್ಕೆ ಬಂದ ಮಗನಿಗೆ ಅಪ್ಪನ ಬಗ್ಗೆ ಕುತೂಹಲ ಇದ್ದೇ ಇರುತ್ತದೆ. ಈ ವಿಷಯ ಗೊತ್ತಿದ್ದೂ ಪೆದ್ದಿಯ ಹಾಗೆ ಅವನನ್ನು ಸಂಧಾನಕ್ಕೆ ಕಳಿಸಿಕೊಟ್ಟಿದ್ದು ಸರಿಯಾ, ತಪ್ಪಾ? ಬೀಗರಾಗುವವರ ಹಟ ತುಟ್ಟಿಯಾದರೆ? ಬೆಳೆದ ಮಗ ಅಪ್ಪನ ಗುಂಗಿಗೆ ಬಿದ್ದರೆ? ಇಷ್ಟು ವರ್ಷ ಬೆವರು, ರಕ್ತ ಒಂದು ಮಾಡಿಕೊಂಡು ಸಾಕಿ ದೊಡ್ಡ ಮಾಡಿದ್ದಷ್ಟೇ ತನ್ನ ಪಾಲಿಗೆ ಲಭ್ಯ ಅಂತಾದರೆ? ಕಳಿಸಬಾರದಿತ್ತು ಇವನನ್ನು ಎಂದು ಇಷ್ಟು ಹೊತ್ತಿಗೆ ಹತ್ತು ಸಲ ಉರು ಹಾಕಿಕೊಂಡಿದ್ದಳು ನಾಗಮ್ಮ.

ಆಯ್ತು, ಅವನನ್ನು ಕಳಿಸದಿದ್ದರೆ ಮತ್ಯಾರನ್ನು? ಜಯ, ವಿಜಯರ ಹಾಗೆ ಇಬ್ಬರು ಸೋದರ ಮಾವಂದಿರಿದ್ದಾರೆ, ನಿಜ. ಆದರೆ ಅವರದೇ ಅವರಿಗೆ ಹಾಸಿ ಹೊಚ್ಚುವಷ್ಟಿದೆ. ತನ್ನಮ್ಮ ಬದುಕಿದ್ದಾಗಲಾದರೂ ಸೈ, ಅಕ್ಕ ಅನ್ನಿಸಿಕೊಂಡವಳು ಇದ್ದಾಳೋ, ಸತ್ತಿದ್ದಾಳೋ ಎಂದು ವರ್ಷಕ್ಕೊಂದು ಸಲವಾದರೂ ಬಂದು ನೋಡುವ ಪದ್ಧತಿ ಉಳಿಸಿಕೊಂಡಿದ್ದರಾ? ಎಲ್ಲಿ ಇವರ ಮನೆಯ ಗೋಜಲು ತಮ್ಮ ಕೊರಳಿಗೆ ಸುತ್ತಿಕೊಳ್ಳುತ್ತದೆಯೋ ಎನ್ನುವ ಹಾಗೆ ಮೊದಲಿಂದ ಅವರಷ್ಟಕ್ಕವರು ದೂರ ದೂರ ಇದ್ದುಬಿಟ್ಟರು. ಗಟ್ಟಿಗಿತ್ತಿ ಅಮ್ಮ, ಹೆತ್ತ ಮಗಳ ಮೇಲೆ, ಮಡಿಲಿಗೆ ಬಿದ್ದ ಮೊಮ್ಮಕ್ಕಳ ಮೇಲೆ ಅತಿರೇಕ ಎನ್ನುವಷ್ಟು ಪ್ರೀತಿ ತೋರಿಸಿಬಿಟ್ಟಳು. ಅಪ್ಪ ಮಾತ್ರ ಅಮ್ಮನ ಮೇಲೆ ಅಸಹನೆ ಬೆಳೆಸಿಕೊಂಡು ಕೊನೆ ಕೊನೆಗೆ ಅಮ್ಮನ ತಲೆ ಕಂಡರೆ ಆಗುವುದಿಲ್ಲ ಅನ್ನುವ ಹಾಗಾಗಿ ಗಂಡ ಹೆಂಡಿರ ಮಧ್ಯೆ ಮಾತೂ ನಿಂತು ಹೋಯ್ತು. ಏನು ಬೇಕಾದರೂ ನಾಲಿಗೆಯಲ್ಲಿ ಬರುತ್ತಿದ್ದ ಹೆಸರು ನಾಗಮ್ಮ. 'ದೇವರು ಬಂಗಾರದಂತಾ ಎರಡು ಮಕ್ಕಳನ್ನ ಕೊಟ್ಟಿದಾನೆ, ನಿಂಗೇನೇ ಕಡಿಮೆ? ಅವನ್ನ ಸಾಕಿ ದೊಡ್ಡ ಮಾಡಿ ದಾರಿಗೆ ಹಚ್ಚೋದು ನೋಡು..' ಅಮ್ಮ ಈ ಮಾತನ್ನು ಯಾವಾಗಲೂ ಹೇಳುತ್ತಿರು ತ್ತಿದ್ದಳು. ಬಂಗಾರದಂತಾ ಮಕ್ಕಳನ್ನು ಸಾಕಿ ಬೆಳೆಸಿದ್ದಾಯ್ತು. ದೊಡ್ಡವರೂ ಆದರು. ಈ ಹೊತ್ತಿಗೆ ಹದ್ದು ಬಂದು ಎಗರಿಸಿಕೊಂಡು ಹೋದರೆ ತಾಳಿಕೊಳ್ಳುವ ಶಕ್ತಿ ತನಗಿದೆಯಾ?

ಮಗಳ ಮದುವೆಗೆ ಬರಲು ಆ ಮನುಷ್ಯ ಒಪ್ಪಿದರೂ ಕಷ್ಟ, ಒಪ್ಪದಿದ್ದರೆ ಪರಮ ಕಷ್ಟ. ಒಪ್ಪಿ ಬಂದ ಅಂತಾದರೆ ಮಗಳ ಕಣ್ಣಲ್ಲಿ ದೊಡ್ಡ ಮನುಷ್ಯರಾಗಿ ಬಿಡುತ್ತಾರೆ. ಬರಲಿಲ್ಲ ಅಂದರೆ ಮಗಳು ಮನಸಾರೆ ಮೆಚ್ಚಿಕೊಂಡ ಹುಡುಗನನ್ನು ಕೈ ಹಿಡಿಯಲು ಸಾಧ್ಯವಾಗದೆ ಆಗಲೂ ಉರುಳು ಸುತ್ತಿಕೊಳ್ಳುವುದು ತನ್ನನ್ನೇ. 'ಮಕ್ಕಳ ಮಕ ನೋಡಿಕೊಂಡಾದ್ರೂ ನೆಟ್ಟಗೆ ಸಂಸಾರ ಮಾಡ್ಕೊಂಡಿರಬಾರ್ದಿತ್ತಾ? ಗಂಡನನ್ನು ದೂರ ಮಾಡಿಕೊಳ್ಳೋ ಕರ್ಮ ಯಾಕೆ ಬೇಕಿತ್ತು?' ಎಂದು ಮಗಳೇನಾದರೂ ಕೇಳಿದಳೆಂದರೆ ಉತ್ತರ ಹೇಳುವುದು ಸುಲಭ ಅಲ್ಲ. ಈಗಿನ ಕಾಲದ ಮಕ್ಕಳು ಹೆತ್ತವರ ಮೇಲೆ ಸಲೀಸಾಗಿ ಗೂಬೆ ಕೂರಿಸಿದರೆ ಆಶ್ಚರ್ಯ ಇಲ್ಲ. ತಾನು ಅನುಭವಿಸಿದ ಸಂಕಷ್ಟ, ಇಬ್ಬಂದಿತನ, ನರಕಯಾತನೆ ಮಕ್ಕಳಿಗೆ ಮನವರಿಕೆ ಮಾಡಿಸುವುದು ಹೇಗೆ? ಒಬ್ಬರ ಕಷ್ಟವನ್ನು ಮತ್ತೊಬ್ಬರಿಗೆ ಅರ್ಥ ಮಾಡಿಸುತ್ತೇನೆನ್ನುವುದೂ ಕೂಡಾ ಅಸಂಬದ್ಧ ವಿಚಾರ. ಅವರವರು ಅನುಭವಿಸುವ ವ್ಯಥೆ ಅವರವರದ್ದು. ಟೀವಿ ನೋಡುತ್ತಾ ಜೂಪಗೆ ಕೂತಿದ್ದ ಮಗಳ ಮೇಲೆ ನಾಗಮ್ಮನಿಗೆ ವಿನಾಕಾರಣ ಕೋಪ ಬಂತು. ಈಗೆಲ್ಲಾ ಸರಿಯಾದ ಹುಡುಗಿಯರು ಮದುವೆಗೆ ಲಭ್ಯವಾಗುವುದೇ ದೊಡ್ಡ ಪುಣ್ಯ ಅನಿಸುವ ಕಾಲ. ತಕ್ಕ ಹುಡುಗಿಯನ್ನು ಆಯ್ಕೆ ಮಾಡಿಕೊಳ್ಳುವ ವಿಷಯದಲ್ಲಿ ಹುಡುಗರು ಹೆದರುತ್ತಿದ್ದಾರಂತೆ. ತಣ್ಣೀರನ್ನೂ ತಣಿಸಿ ಕುಡಿಯಬೇಕಾದ ಕಾಲ ಬಂದಿದೆಯಂತೆ. ಇವನಲ್ಲದಿದ್ದರೆ ಇವನ ಅಪ್ಪನಂತವನು ಇನ್ನೊಬ್ಬ ಬರುತ್ತಿದ್ದ. ಇವರು ಹೇಳಿದ ಕಂಡೀಷನ್‌ಗಳಿಗೆಲ್ಲಾ ಕೋಲೆ ಬಸವನಂತೆ ತಲೆ ಹಾಕಬೇಕಾದ ಕರ್ಮ ತಮಗ್ಯಾಕೆ ಬೇಕಿತ್ತು? 'ನೋಡಿ, ನಮ್ಮನೆಯ ಕತೆ ಹಿಂಗ್ಹಿಂಗೆ. ಇಷ್ಟ ಇದ್ರೆ ಸಂಬಂಧಕ್ಕೆ ಒಪ್ಪಿ. ಇಲ್ಲದಿದ್ರೆ